O.S.No.:109/2018

PW.:1

**ದಿಃ 15-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ Sri.MVS ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಸಂಗತಿಗಳು ನನಗೆ ತಿಳಿದಿರುತ್ತವೆ ಹಾಗೂ ನಾನು ಸದರಿ ಪ್ರಮಾಣ ಪತ್ರಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ.

ಸಾಕ್ಷಿಯು ಈ ದಿನ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಈ ಕೆಳಕಂಡಂತೆ ನಿಶಾನೆಗೊಳಿಸಲಾಗಿದೆ.

1. ಬೈರನಟ್ಟಿ ಗ್ರಾಮದ ಸರ್ವೇ ನಂ.63 ಜಮೀನಿನ ಪಹಣಿ ಪತ್ರಿಕೆ ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-1 ಎಂದು,
2. ಬೈರನಟ್ಟಿ ಗ್ರಾಮದ ಸರ್ವೇ ನಂ.63/2 ಜಮೀನಿನ ಪಹಣಿ ಪತ್ರಿಕೆ ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-2 ಎಂದು,
3. ಬೈರನಟ್ಟಿ ಗ್ರಾಮದ ಸರ್ವೇ ನಂ.12/3 ಜಮೀನಿನ ಪಹಣಿ ಪತ್ರಿಕೆ ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-3 ಎಂದು,
4. ದಿಃ 29.06.2015 ರಂದು ಪ್ರತಿವಾದಿ ನಂ.1 ಮತ್ತು 2 ರವರು ನನಗೆ ಬರೆದುಕೊಟ್ಟ ಬಿನ್ ಕಬ್ಜಾ ಖರೀದಿ ಕರಾರು ಪತ್ರ ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-4 ಎಂದು, ಅದರಲ್ಲಿನ ಪ್ರತಿವಾದಿ ನಂ.1 ಮತ್ತು 2 ರವರ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-4(ಎ) ಮತ್ತು ನಿಪಿ-4(ಬಿ) ಎಂದು,
5. ದಿಃ 20-08-2018 ರಂದು ಪ್ರತಿವಾದಿಗೆ ವಕೀಲರ ಮುಖಾಂತರ ನೊಟೀಸ ನೀಡಿದ್ದು, ಕಚೇರಿ ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-5 ಎಂದು,
6. ಅಂಚೆ ರಶೀದಿಯನ್ನು ಹಾಜರುಪಡಿಸುತ್ತಿದ್ದೇನೆ, ಅದನ್ನು ನಿಪಿ-6 ಎಂದು,
7. Track consignment ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಸಮಯ ಕೋರಿದ್ದು ನ್ಯಾಯಯುತವಾದ ದೃಷ್ಟಿಯಿಂದ ಸಮಯ ನೀಡಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
**ಮೂಡಲಗಿ.**